ಅರ್ಜಿ ಹಾಕಿದ ಎಷ್ಟೋ ಜನಕ್ಕೆ ನಿವೇಶನ ಸಿಕ್ಕಿಲ್ಲ. ಅವರಿಗೆ ಕೊಡುವ ಒಂದು ಯೋಜನೆಯಿಂದ, ಎಲ್ಲಾ ಸಹಕಾರ ಸಂಘಗಳನ್ನೂ ತೆಗೆದುಕೊಳ್ಳಬೇಕೆಂದು ಮಾಡಿದೆ. ಆದ್ದರಿಂದ ಈಗ ಪುನರ್ ಪರಿಶೀಲನೆ ಮಾಡುವಂತಹ ಸಂದರ್ಭ ಇಲ್ಲ. ಸರ್ಕಾರದವರು ಮಾಡಿರತಕ್ಕ ಒಂದು ನಿರ್ಧಾರದ ಜೊತೆಗೆ ಏನಾದರೂ ಸಲಹೆ ಸೂಚನೆಗಳು ಇದ್ದರೆ ತಾವು ಕೊಡಬಹುದು. ಇದನ್ನು ಇನ್ನೂ ಉತ್ತಮಪಡಿಸುವ ದೃಷ್ಟಿಯಿಂದ, ಅದನ್ನು ಸರ್ಕಾರ ಪರಿಶೀಲಿಸುತ್ತದೆ. ಈಗ ಬೆಂಗಳೂರು ನಗರದಲ್ಲಿ ಇದೊಂದು ರಾಕೆಟ್ ಆಗಿದೆ. ಮಧ್ಯವರ್ತಿ ಜನಗಳ ರಾಕೆಟ್‌ನ್ನು, ಅವರ ಕೈಯಿಂದ ತಪ್ಪಿಸುವ ಉದ್ದೇಶದಿಂದಲೇ ಇದನ್ನು ಮಾಡಲಾಗಿದೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ

ದ. // <u>ನಿಯಮ ೩೩ಳರ ಮೇರೆಗೆ</u>

ವಿಷಯ:- ೧) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಖೆರ್ಡಾ(ಬಿ)ಗ್ರಾಮದಲ್ಲಿ ಶಾಲಾ ಕಟ್ಟಡದ ಕೆಲಸವನ್ನು ಪೂರ್ಣಗೊಳಿಸುವ ಬಗ್ಗೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):- ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆಯ ಔರಾದ್ ಮತಕ್ಷೇತ್ರದಲ್ಲಿ ಬರುವ ಖೆರ್ಡಾ(ಬಿ) ಗ್ರಾಮಕ್ಕೆ ಜಿಲ್ಲಾ ಪರಿಷತ್ತಿನಿಂದ ಒಂದು ಶಾಲಾ ಕಟ್ಟಡದ ನಿರ್ಮಾಣಕ್ಕಾಗಿ ಮಂಜೂರಾತಿ ದೊರತಿದ್ದು ಇದರ ಟೆಂಡರ್ ಸಹ ಆಗಿರುತ್ತದೆ. ನಿರ್ಮಾಣ ಕಾರ್ಯವನ್ನು ವಹಿಸಿಕೊಂಡಿರುವ ಗುತ್ತಿಗೆದಾರರು ನಿರ್ಮಾಣಕ್ಕೆ ಮುಂಚೆಯೇ ಹಣವನ್ನು ತೆಗೆದುಕೊಂಡಿದ್ದು, ನಿರ್ಮಾಣದ ಕೆಲಸವನ್ನೇ ಪ್ರಾರಂಭಿಸಿರುವುದಿಲ್ಲ. ಕಳೆದ ೨ ವರ್ಷಗಳಿಂದ ಈ ನಿರ್ಮಾಣದ ಕೆಲಸವನ್ನೇ ಪ್ರಾರಂಭಿಸಿರುವುದಿಲ್ಲ, ಹಾಗೆಯೇ ನಿಂತಿದೆ. ಇದರಿಂದಾಗಿ ಇಲ್ಲಿನ ಶಾಲಾ ಮಕ್ಕಳಿಗೆ ಕಟ್ಟಡವಿಲ್ಲದೇ ಬಹಳ ತೊಂದರೆಯಾಗಿದೆ. ಈ ಗ್ರಾಮವು ಬಹಳ ಹಿಂದುಳಿದ ಗ್ರಾಮವಾಗಿದ್ದು ಮಹಾರಾಷ್ಟ್ರ ಜಿಲ್ಲೆಯ ಗಡಿಯ ಸಮೀಪದಲ್ಲಿದೆ. ಆದ್ದರಿಂದ ಈ ಶಾಲಾ ಕಟ್ಟಡದ ನಿರ್ಮಾಣದ ಕೆಲಸವನ್ನು ಕೂಡಲೆ ಪ್ರಾರಂಭಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಲೋಕೋಪಯೋಗಿ ಸಚಿವರನ್ನು ಏನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ೪೦ ಜನ ಮಂತ್ರಿಗಳಾದರೂ ಸಮಯಕ್ಕೆ ಸರಿಯಾದ ಉತ್ತರ ಇಲ್ಲ. ೪೦ ಜನರಲ್ಲಿ ೧೦ ಜನರಾದರೂ ಇಲ್ಲಿ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಗೈರು ಹಾಜರಿದ್ದವರನ್ನು ತೆಗೆದು ಬೇರೆಯವರನ್ನು ಮಾಡುವುದಕ್ಕೆ ಬರುತ್ತದಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮುಂದಿನ ಪ್ರಶ್ನೆ ತೆಗೆದುಕೊಳ್ಳಬಹುದು. ಮುಂದಿನ ಪ್ರಶ್ನೆಯಾದ ತಕ್ಷಣ ಇದಕ್ಕೆ ಉತ್ತರ ಹೇಳುತ್ತೇನೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:- ಈ ರೀತಿಯ ಅಶಿಸ್ತು ಇರುವುದು ಸರಿಯಲ್ಲ. ತಾವು ಸರ್ಕಾರಕ್ಕೆ ಸೂಕ್ತವಾದ ನಿರ್ದೇಶನ ಕೊಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಸರ್ಕಾರಕ್ಕೆ ಏನು ತೊಂದರೆ ಇದೆ ಎಂಬುದೇ ಅರ್ಥವಾಗಲಿಲ್ಲ. ೪೧ ಜನ ಮಂತ್ರಿಗಳು ಇದ್ದಾರೆ. ಇಂತಹ ತೊಂದರೆ ಏಕೆ ಬಂತು?

೨) ಹಾಸನದಲ್ಲಿರುವ ವಿಭಜಿತ ಬಾಲಕಿಯರ ಪ್ರೌಢ ಶಾಲಾ ಕಟ್ಟಡದ ದುರಸ್ತಿ.

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ):- ಮಾನ್ಯ ಅಧ್ಯಕ್ಷರೇ, ಹಾಸನ ಪಟ್ಟಣದಲ್ಲಿ ಇರುವ ವಿಭಜಿತ ಬಾಲಕಿಯರ ಪ್ರೌಢಶಾಲೆಯಲ್ಲಿ ಅಂಕ್ಕು ಮೇಲ್ಪಟ್ಟು ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು, ಈ ಪ್ರೌಢ ಶಾಲೆಯ ಕಟ್ಟಡವು ತುಂಬಾ ಶಿಥಿಲವಾಗಿದ್ದು ನೂರಾರು ಕಡೆ ಮಳೆಯ ನೀರಿನಿಂದ ಸೋರುತ್ತಿದ್ದು ಕಟ್ಟಡ ಅನೇಕ ಕಡೆ ಬಿರುಕು ಬಿಟ್ಟಿದೆ ಮತ್ತು ಗಾರೆ ಗಿಲಾವು ಸಹ ಬಿದ್ದು ಹೋಗಿದೆ. ಈ ಕಟ್ಟಡವನ್ನು ಈ ವರ್ಷ ಬೇಸಿಗೆಯಲ್ಲಿ ರಿಪೇರಿ ಮಾಡಿಸದಿದ್ದರೆ ಮುಂದಿನ ಮಳೆಗಾಲದಲ್ಲಿ ಈ ಕಟ್ಟಡದಲ್ಲಿ ತರಗತಿಗಳನ್ನು ನಡೆಸಲು ಸಾಧ್ಯವಾಗುವುದಿಲ್ಲ. ಈ ಕಾರಣ ಈ ಕಟ್ಟಡವನ್ನು ಅದಷ್ಟು ಜಾಗ್ರತೆ ದುರಸ್ತಿ ಪಡಿಸಿ, ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ಗರ್ಲ್ಸ್ ಹೈಸ್ಕೂಲ್ ಬಿಲ್ಡಿಂಗ್ ಸ್ಪೆಷಲ್ ರಿಪೇರಿ ಬಗ್ಗೆ ಕಡೆ ಇರತಕ್ಕ ಮಾಹಿತಿಯನ್ನು ಕೊಡುತ್ತಿದ್ದೇನೆ. ಇದರಲ್ಲಿ ರಿಪೇರಿ ಮಾಡುವ ಅವಶ್ಯಕತೆ ಇದೆ. ಚೀಫ್ ಸೆಕ್ರಟರಿಯವರು ಇನ್‌ಸ್ಪೆಕ್ಷನ್ ಮಾಡಿದ್ದಾರೆ. ಅವರ ಕಡೆ ಏನು ಹಣ ಇದೆ, ಅದನ್ನು ಉಪಯೋಗಿಸಿ ತಕ್ಷಣ ಏನು ರಿಪೇರಿ ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡುತ್ತಿದ್ದಾರೆ. ಇನ್ನೊಂದು ಡೀಟೈಲ್ಡ್ ಎಸ್ಟಿಮೇಟ್ ಮಾಡಿ, ಪೂರ್ತಿ ರಿಪೇರಿ ಮಾಡುವುದಕ್ಕೆ ಎಷ್ಟು ಹಣ ಬೇಕಾಗುತ್ತದೆ, ಅದು ವರದಿ ಬಂದ ತಕ್ಷಣ, ನಾವು ಆ ಕೆಲಸವನ್ನು ಮಾಡುತ್ತೇವೆ.

೧೨.೦೦ಎ ಎಂ

ಛೇರ್ಮನ್:- ತಮ್ಮ ಪ್ರಸ್ತಾಪಕ್ಕೆ ಆಗಲೇ ಉತ್ತರ ಬಂದಿದೆ.

ಶ್ರೀ ಆರ್.ವಿ. ದೇಶಪಾಂಡೆ:- ಇದೇನಿದು ಹೊಸ ಪದ್ಧತಿ ಶುರು ಆಯಿತಲ್ಲ. ಮಂತ್ರಿಗಳು ಮುಂದೆ ಉತ್ತರ ಕೊಡುವುದು ಆಮೇಲೆ ಸದಸ್ಯರು ಪ್ರಸ್ತಾಪ ಮಾಡುವುದು. ಇದು ಏನು ಪದ್ಧತಿ? ಮಾನ್ಯ ಸ್ನೇಹಿತರು ಹೇಳಿದಂತೆ ೪೦ ಮಂದಿ ಮಂತ್ರಿಗಳಾಗಿ ಈ ಪರಿಸ್ಥಿತಿ ಆಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ನಿಯಮ ೩೩ಳಕ್ಕೇ ಒಬ್ಬ ಮಂತ್ರಿಯನ್ನು ನೇಮಕ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮೊಯಿಲಿಯವರಿಗೆ ಮನವಿ ಮಾಡಿಕೊಳ್ಳುತ್ತೇನೆ. ೪೨ ಜನ ಮಂತ್ರಿಗಳು ಇದ್ದಾರೆ. ಮೊದಲ ಬಾರಿಗೆ ಅಧಿವೇಶನ ನಡೆಯುತ್ತಿದೆ. ಅಧಿವೇಶನ ಶುರುವಾಗಿ ೪ ದಿವಸ ಆಗಿಲ್ಲ. ವಿಧಾನ ಪರಿಷತ್ತಿನಲ್ಲಿ ಮಂತ್ರಿಗಳು ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ. ಈ ಸರ್ಕಾರಕ್ಕೆ ಏನು ಗ್ರಹಚಾರ ಬಂದಿದೆಯೋ ನನಗೆ ಅರ್ಥವಾಗುತ್ತಿಲ್ಲ. ಈ ಸರ್ಕಾರಕ್ಕೆ ಏನಾದರೂ ಗ್ರಹಣ ಹಿಡಿದಿದೆಯೋ ಏನೋ ಅರ್ಥವಾಗುತ್ತಿಲ್ಲ. ನಿಯಮ ೩೩ಳಕ್ಕೆ ಉತ್ತರ ಕೊಡುವವರೇ ಇಲ್ಲ ಎಂದರೆ ಎಷ್ಟೊಂದು ತಾತ್ಸಾರ ನೋಡಿ. ಇದೆಲ್ಲ ಓವರ್‌ಲೋಡ್ ಪ್ರಾಬ್ಲಂ.

ಶ್ರೀ ಬಿ.ಎಚ್. ಬನ್ನಿಕೋಡ್:- ಈ ಮನೆಯ ಕಲಾಪದ ಬಗ್ಗೆ ಸರ್ಕಾರಕ್ಕೆ ಏನಾದರೂ ಅರಿವಿದೆಯೇ, ಜವಾಬ್ದಾರಿ ಇದೆಯೇ, ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಕಾಳಜಿ ಇದಯೆ? ಅಥವಾ ಅವರು ಬೇರೆ ಬೇರೆ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೇನು? ಇಷ್ಟು ಹೇಳಿದರೂ ಪ್ರಯೋಜನವಾಗುತ್ತಿಲ್ಲ. ತಾವು ಏನಾದರೂ ಬಂದು ವ್ಯವಸ್ಥೆಮಾಡಿಸಿ.

ಶ್ರೀ ಪಿ.ಸಿ. ಸಿದ್ದನಗೌಡ:- ಸರಳ ಭಾಷೆಯಲ್ಲಿ ಹೇಳಿದರೆ ಅವರಿಗೆ ಅರ್ಥವಾಗುವುದಿಲ್ಲ. ಸ್ವಲ್ಪ ಬೇರೆ ಭಾಷೆಯಲ್ಲಿ ಹೇಳಿ.

ಛೇರ್ಮನ್:- ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು.